**ಕರ್ನಾಟಕ ಸರ್ಕಾರ**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ**

**(ಜನಸ್ಪಂದನ ಕೋಶ)**

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು. ದಿನಾಂಕ:15.04.2009

ಸಂಖ್ಯೆ:ಸಿಆಸುಇ:59:ಆರ್‌ಟಿಐ:2009

## ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ರ ಅನುಷ್ಠಾನ ಕುರಿತಂತೆ ರಚಿತವಾಗಿರುವ ಉನ್ನತ ಮಟ್ಟದ ಸಮಿತಿಯ ದಿ: 11.03.2009 ರ ಸಭೆಯ ನಡವಳಿಯ ಮೇಲಿ ಕ್ರಮದ ಕುರಿತು.

ಉಲ್ಲೇಖ : ದಿ: 11.03.2009 ರ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿ.

-------

ದಿನಾಂಕ :11.03.2009ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಮಾಹಿತಿ ಹಕ್ಕು ಅಧಿನಿಯಮ-2005ರ ಸಮಗ್ರ ಅನುಷ್ಠಾನ ಕುರಿತಂತೆ ರಚಿತವಾಗಿರುವ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿಯ ಕಂಡಿಕೆ 1 ರಲ್ಲಿ ನಿರ್ಧರಿಸಿರುವಂತೆ ಸಚಿವಾಲಯ ಇಲಾಖೆಗಳು ಹಾಗೂ ಆ ಇಲಾಖೆಗಳ ಅಧೀನಕ್ಕೊಳಪಡುವ ಸಾರ್ವಜನಿಕ ಪ್ರಾಧಿಕಾರಗಳು ಅಂದರೆ, ಕ್ಷೇತ್ರ ಇಲಾಖೆಗಳು/ನಿಗಮ ಮಂಡಳಿಗಳು, ಅನುದಾನಿತ ಸಂಘ ಸಂಸ್ಥೆಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1) (ಎ), 4(1) (ಬಿ), 5 (1)ರ ಅನುಷ್ಠಾನ ಕುರಿತಂತೆ ಸಂಬಂಧಿಸಿದ ಮಾಹಿತಿಗಳನ್ನು ಹಾಗೂ ಸಾರ್ವಜನಿಕ ಪ್ರಾಧಿಕಾರ, ಮೊದಲ ಮೇಲ್ಮನವಿ ಪ್ರಾಧಿಕಾರ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ, ವಿಳಾಸ, ಕಛೇರಿ ದೂರವಾಣಿ ಸಂಖ್ಯೆ ಮುಂತಾದ ವಿವರಗಳನ್ನು ಪ್ರಕಟಿಸತಕ್ಕದ್ದು ಹಾಗೂ ತಪ್ಪದೇ ತಮ್ಮ ತಮ್ಮ ಇಲಾಖೆಗಳು ಹೊಂದಿರುವ ವೆಬ್‌ಸೈಟ್‌ನಲ್ಲಿ ಅಳವಡಿಸಿ, ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ಕಾಲಕಾಲಕ್ಕೆ up-date ಮಾಡುವಂತೆ ಹಾಗೂ ಈ ಪ್ರಕ್ರಿಯೆಯ ಅನುಷ್ಠಾನದಲ್ಲಿ ವಿಳಂಬ/ ಬೇಜವಾಬ್ದಾರಿ/ಉದಾಸೀನತೆ ತೋರಿಸುವ ಅಧಿಕಾರಿ/ನೌಕರರನ್ನು ಗುರುತಿಸಿ ಅವರನ್ನೇ ಹೊಣೆಗಾರರನ್ನಾಗಿಸತಕ್ಕದ್ದೆಂದು ಸೂಚಿಸಿದೆ.

ಕಂಡಿಕೆ 2ರಲ್ಲಿ ನಿರ್ಧರಿಸಿರುವಂತೆ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಿರುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಪರಿಶೀಲನೆ ಮಾಡಿ ನಿಗಧಿತ ಅವಧಿಯಲ್ಲಿ ಸೂಕ್ತ ಉತ್ತರವನ್ನು ನಿಯಮಾನುಸಾರ ಅರ್ಜಿದಾರರಿಗೆ ಒದಗಿಸತಕ್ಕದ್ದೆಂದು ಹಾಗೂ ಮಾಹಿತಿ ನೀಡುವಾಗ ಅರ್ಜಿದಾರರಿಗೆ ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರ/ಮೇಲ್ಮನವಿ ಪ್ರಾಧಿಕಾರ/ ಮಾಹಿತಿ ಅಧಿಕಾರಿಯ ಹೆಸರು ದೂರವಾಣಿ ಸಂಖ್ಯೆ , ಇತ್ಯಾಧಿ ಅವಶ್ಯಕ ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕೆಂದು ಸೂಚಿಸಿದೆ.

--2

ಕಂಡಿಕೆ I (ಅ) ನಲ್ಲಿ ನಿರ್ಧರಿಸುವಂತೆ ಕಡತ / ದಾಖಲೆಗಳು ಕಳೆದ ಹೋದ ಸಂದರ್ಭದಲ್ಲಿ ಕಾರಣರಾದವರ ಬಗ್ಗೆ ಒಂದು ಆಂತರಿಕ ವಿಚಾರಣೆ / ತನಿಖೆಯನ್ನು ನಡೆಸತಕ್ಕದ್ದು ಮತ್ತು ಪೊ ದೂರನ್ನು ಸಹ ದಾಖಲಿಸುವುದು, ಹೀಗೆ ದಾಖಲಾದ ದೂರುಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಂಡ ನಂ ವರದಿ / ಮಾಹಿತಿಯನ್ನು ಅರ್ಜಿದಾರರಿಗೆ / ಸಂಬಂಧಪಟ್ಟವರಿಗೆ ನೋಂದಾಯಿತ ಅಂಚೆ ಸ್ವೀಕೃತಿ ಬ ಮೂಲಕ ರವಾನಿಸುವಂತೆ ಸೂಚಿಸಿದೆ.

ಈ ವಿಷಯವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗ ನಿಗಮ/ಮಂಡಳಿಗಳು, ಅನುದಾನಿತ ಸಂಘ ಸಂಸ್ಥೆಗಳ ಗಮನಕ್ಕೆ ತರುವಂತೆಯೂ ಸೂಚಿಸಿದೆ.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
2. ಎಲ್ಲಾ ಇಲಾಖಾ ಮುಖ್ಯಸ್ಥರು
3. ಎಲ್ಲಾ ಜಿಲ್ಲಾಧಿಕಾರಿಗಳು,
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
5. ಹೆಚ್ಚಿನ ಪ್ರತಿ

ಪ್ರತಿ:

1) ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು,ವಿಧಾನಸೌಧ, ಬೆಂಗಳೂರು.
2) ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

\\Used\dpar\Office Work New 24-10-2007\Office work\Right to Information Act-2009\Circulars.doc